ಈ) ಪತ್ರಕರ್ತರ ಮಾಸಾಶನಕ್ಕೆ ಒಟ್ಟು ಎಷ್ಟು ಅರ್ಜಿಗಳು ಬಂದಿವೆ? ಇದರಲ್ಲಿ ಎಷ್ಟು ಅರ್ಜಿಗಳು ವಿಲೇವಾರಿಯಾಗಿದೆ?

ಉ) ಅಧಿಕೃತ ಪತ್ರಕರ್ತರಿಗೆ ನೀಡಲಾಗುವ ಬಸ್ ಕೂಪನ್ ಹಣವನ್ನು ಹೆಚ್ಚಿಸುವ ತೀರ್ಮಾನವೇನನ್ನಾದರೂ ಸರ್ಕಾರ ತೆಗೆದುಕೊಂಡಿದೆಯೇ? ಹಾಗಿದ್ದಲ್ಲಿ ಎಷ್ಟು ಹಣದಿಂದ ಎಷ್ಟು ಹಣದವರೆಗೆ ಹೆಚ್ಚಿಸಲಾಗುವುದು.

ಊ) ಯಾವಾಗಿನಿಂದ ಜಾರಿಗೆ ಬಂದಿದೆ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ರಚಿಸಲಾಗಿದೆ.

ನ್ಯಾಯಮೂರ್ತಿ ಶ್ರೀ ಇ.ಎಸ್. ವೆಂಕಟರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯಲ್ಲಿ ಶ್ರೀ ಬಿ.ವಿ. ಮಲ್ಲಿಕಾರ್ಜುನಯ್ಯ ಅಧ್ಯಕ್ಷರು, ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ, ಬೆಂಗಳೂರು. ಶ್ರೀ ಕೆ. ಶ್ರೀಧರ ಅಚಾರ್, ಅಧ್ಯಕ್ಷರು, ಬೆಂಗಳೂರು ಪ್ರೆಸ್ ಕ್ಲಬ್, ಶ್ರೀ ಸಿ.ವಿ. ರಾಜಗೋಪಾಲ್ ಹಿರಿಯ ಪತ್ರಕರ್ತರು, ಬೆಂಗಳೂರು, ಶ್ರೀ ಹೆಚ್.ಎನ್. ಷಡಾಕ್ಷರಪ್ಪ, ಸಂಪಾದಕರು, ಜನತಾವಾಣಿ, ದಾವಣಗೆರೆ ಸದಸ್ಯರಾಗಿರುವ ಈ ಸಮಿತಿಯ ಸದಸ್ಯ-ಕಾರ್ಯದರ್ಶಿಯಾಗಿ ವಾರ್ತಾ ಮತ್ತು ಪ್ರಚಾರ ಇಲಾಖೆಯ ನಿರ್ದೇಶಕರು ಇರುವರು.

ಆ) ಪ್ರತಿಶತಃ 25ರ ದರದಲ್ಲಿ ಹೆಚ್ಚಿಸಲಾಗಿದೆ.

ಇ) ದಿನಾಂಕ: 1-11-1995ರಿಂದ ಜಾರಿಗೊಳಿಸಲಾಗಿದೆ.

ಈ) ಜನವರಿ 1996ರವರೆಗೆ 171 ಅರ್ಜಿಗಳು ಬಂದಿದ್ದು, ಅದರಲ್ಲಿ 155 ಪತ್ರಕರ್ತರಿಗೆ ಮಾಸಾಶನ ಮಂಜೂರು ಮಾಡಲಾಗಿದೆ.

ಉ) ಇದುವರೆಗೆ ಮಾನ್ಯತೆ ಪಡೆದ ಪತ್ರಕರ್ತರಿಗೆ ಶೇ. 50ರ ರಿಯಾಯಿತಿಯಲ್ಲಿ ಬಸ್ ಕೂಪನ್‌ಗಳನ್ನು ನೀಡಲಾಗುತ್ತಿತ್ತು ಸರ್ಕಾರದ ಆದೇಶ ಸಂಖ್ಯೆ : ಐಟಿವೈ 55 ಮಾಪ್ರಪ 94, ದಿನಾಂಕ: 23-9-1995ರ ಆದೇಶದಲ್ಲಿ ಸರ್ಕಾರವು ಪ್ರತಿ ಪತ್ರಕರ್ತರಿಗೆ ರೂ. 500 ಬೆಲೆಯ ಬಸ್ ಕೂಪನ್‌ಗಳನ್ನು ಮಂಜೂರು ಮಾಡಿದೆ.

ಊ) ದಿನಾಂಕ: 23-9-1995ರಂದು ಸರ್ಕಾರದ ಆದೇಶ ಹೊರಡಿಸಿದೆ.

ಅಧ್ಯಕ್ಷರು : ಮಂಡಿಸಲಾಯಿತು.

ಪ್ರಕಟಣೆ

ಅಧ್ಯಕ್ಷರು : ದಿನಾಂಕ 22ನೇ ತಾರೀಖು ಪ್ರಶ್ನೋತ್ತರ ನಡೆಯತಕ್ಕಂಥ ಸಂದರ್ಭದಲ್ಲಿ ಜಯಮಹಲ್ ಕ್ಷೇತ್ರದ ಸದಸ್ಯರಾದ ಶ್ರೀ ಕೃಷ್ಣಪ್ಪನವರ ಪ್ರಶ್ನೆ ಇತ್ತು ಅವರು ಗೈರು ಹಾಜರಾಗಿದ್ದರು. ನಾನು ಆ ವಿಚಾರದಲ್ಲಿ ಸ್ವಲ್ಪ ಸಿಟ್ಟಿನಲ್ಲಿ. ಅವರ ಪ್ರಶ್ನೆಗಳನ್ನು ಪಟ್ಟಿಯಲ್ಲಿ ತರಬೇಡಿ ಎಂದು ಹಾಳಿದ್ದೆ. ಎರಡು ಮೂರು ಸಾರಿ ಗೈರು ಹಾಜರಾಗಿದ್ದರ ಬಗ್ಗೆ ಶ್ರೀಯುತ ಕೃಷ್ಣಪ್ಪನವರು ನನ್ನನ್ನು ಭೇಟಿಯಾಗಿ ನನ್ನ ಕ್ಷೇತ್ರದಲ್ಲಿ ಆವೊತ್ತು ಯಾವುದೋ ಅನಿವಾರ್ಯ ಕೆಲಸ ಇತ್ತು. ಆದುದರಿಂದ ನಾನು ತಮಗೆ ತಿಳಿಸುವುದಕ್ಕಾಗಲಿಲ್ಲ ಕ್ಷಮಿಸಬೇಕು ಎನ್ನತಕ್ಕಂಥ ಮಾತನ್ನು ಹೇಳಿದರು. ಇದರಲ್ಲಿ ಯಾರನ್ನು ಯಾರೂ ಕ್ಷಮಿಸತಕ್ಕಂಥದ್ದು ಏನೂ ಇರುವುದಿಲ್ಲ. ಅವರು ಮೊದಲನೇ ಬಾರಿಗೆ ಆರಿಸಿ ಬಂದಿರತಕ್ಕಂಥವರು ಮತ್ತೆ ಹಿಂದುಳಿದ ವರ್ಗಕ್ಕೆ ಸೇರಿದಂಥ ಒಬ್ಬ ಶಾಸಕರು. ಶಾಸನ ಸಭೆಯ ಕಲಾಪಗಳಿಗೆ ಅಗೌರವ ತೋರಿಸತಕ್ಕಂಥ ಭಾವನೆ

ಇಲ್ಲವೆಂದು ಏನು ಹೇಳಿದ್ದಾರೆ ಆ ಮಾತು ನನಗೆ ಮನವರಿಕೆಯಾಗಿದೆ. ಪೇಪರ್‌ಗಳಲ್ಲಿ ಈ ವಿಚಾರ ಬಹಳ ವ್ಯಾಪಕವಾಗಿ ಚರ್ಚೆ ಆಗಿದ್ದರಿಂದ ಸ್ವಲ್ಪಮಟ್ಟಿಗೆ ಅವರ ಮನಸ್ಸಿಗೆ ಕೂಡ ನೋವಾಗಿದೆ. ಯಾರ ಮನಸ್ಸನ್ನು ನೋಯಿಸುವುದಕ್ಕೆ ನಾನು ಪ್ರತಿಕ್ರಿಯೆ ತೋರಿಸಲಿಲ್ಲ. ಹೊಸ ಸದಸ್ಯರಲ್ಲಿ ಒಂದು ಶಿಸ್ತು ಮೂಡಿಸಬೇಕು, ಕಲಾಪಗಳಲ್ಲಿ ಅವರು ಸಕ್ರೀಯವಾಗಿ ಭಾಗವಹಿಸಬೇಕು. ಅವರು ಪ್ರಶ್ನೆಯನ್ನು ಕಳುಹಿಸಿದ ಮೇಲೆ, ಅವರು ಒಂದು ವೇಳೆ ಬರಲಿಕ್ಕೆ ಆಗದೇಹೋದರೆ ಮೊದಲೇ ತಿಳಿಸಬೇಕು ಎನ್ನತಕ್ಕಂಥ ಉದ್ದೇಶದಿಂದ ಹೇಳಿದೆ ಅಷ್ಟೆ. ಈ ವಿಚಾರದಲ್ಲಿ ಪತ್ರಿಕಾ ಮಿತ್ರರಲ್ಲೂ ಕೂಡ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಗೆಳೆಯರಾದ ಕೃಷ್ಣಪ್ಪನವರಿಗೆ, ಅವರ ವ್ಯಕ್ತತ್ವಕ್ಕೆ ನಾನು ತೋರಿಸಿರತಕ್ಕಂಥ ಪ್ರತಿಕ್ರಿಯೆಯಿಂದ ಯಾವುದಾದರೊಂದು ತರಹ ನಷ್ಟ ಆಗಿದ್ದರೆ ಅದನ್ನು ಸರಿಪಡಿಸತಕ್ಕಂಥ ಹೊಣೆಯನ್ನು ತಾವೇ ಹೊರಬೇಕು ಎಂದು ಹೇಳಿ ನಾನು ಈ ಮತನ್ನು ಹೇಳುತ್ತೇನೆ. ಈಗ ರಾಜೇಂದ್ರನ್‌ರವರು ಬಂದಿಲ್ಲ.

ಶ್ರೀ ಎನ್. ಸುರೇಶ್ ಕುಮಾರ್ : ತಾವು ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಇಬ್ಬರೂ ಒಂದೇ ವಿಚಾರವನ್ನು ಪ್ರಸ್ತಾಪ ಮಾಡುತ್ತೇವೆಂದು ಹೇಳಿದ್ದೀರಿ. ಕುಡಿಯುವ ನೀರಿನ ವಿಚಾರ ಚಾಮರಾಜಪೇಟೆ ಕ್ಷೇತ್ರಕ್ಕೆ ಸಂಬಂಧಿಸಿದಂತೆ. ಇಬ್ಬರಲ್ಲಿ ಯಾರು ಮೊದಲನೆ ಪ್ರಸ್ತಾಪ ಮಾಡುತ್ತೀರಿ? ನೀವೇ ಇತ್ಯರ್ಥ ಮಾಡಿಕೊಳ್ಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಮತನಾಡುತ್ತೇನೆ.

ಅಧ್ಯಕ್ಷರು : ಅವರು ಮಾತನಾಡುತ್ತಾರೆ, ಆಗಬಹುದೇ ಸುರೇಶ್?

ಶ್ರೀ ಎಸ್. ಸುರೇಶ್ ಕುಮಾರ್ : ಸ್ಟೇಶನ್‌ನಲ್ಲಿ ಏನು ತೊಂದರೆ ಆಗುತ್ತಿದೆ ಎಂದು ನಾನು ಒಂದೆರಡು ನಿಮಿಷ ಆಮೇಲೆ ಮಾತನಾಡುತ್ತೇನೆ.

ಅಧ್ಯಕ್ಷರು : ಆಯಿತು. ಪ್ರಸ್ತಾಪ ಮಾಡಿ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(1) ಚಾಮರಾಜಪೇಟೆ ಕ್ಷೇತ್ರಕ್ಕೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುವ ಬಗ್ಗೆ

+ ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಸಭಾಧ್ಯಕ್ಷರೇ, ಚಾಮರಾಜ್‌ಪೇಟೆ ಕ್ಷೇತ್ರ ಮೂರು ಕ್ಷೇತ್ರಗಳ ಮಧ್ಯದಲ್ಲಿದೆ. ಒಂದು ಕಡೆ ಬಿನ್ನಿಪೇಟೆ, ಮತ್ತೊಂದು ಕಡೆ ಬಸವನಗುಡಿ ಮತ್ತೊಂದು ಕಡೆ ಶಿವಾಜಿನಗರ; ತಮ್ಮ ಕ್ಷೇತ್ರ. ಈ ಮಧ್ಯೆ ಇರತಕ್ಕಂಥ ಕ್ಷೇತ್ರದಲ್ಲಿ ನೀರಿನ ಅಭಾವ ಎಷ್ಟಾಗಿದೆ ಎಂದು ಹೇಳಿದರೆ ಈ ಮೂರು ಕ್ಷೇತ್ರಗಳಲ್ಲಿ ನೀರು ಬರುತ್ತಿದೆ ಆದರೆ ಚಾಮರಾಜಪೇಟೆ ಕ್ಷೇತ್ರದಲ್ಲಿ ನೀರು ಇದುವರೆಗೂ ಸರಾಗವಾಗಿ ಬರುತ್ತಿಲ್ಲ. ಇದು ಕೇವಲ ಆರು ತಿಂಗಳಿಂದಾಚೆಗೆ ಆಗಿದೆ ಎಂದು ನಾನು ಕೇಳಿದ್ದೇನೆ. ಇದಕ್ಕೆ ಕಾರಣ ಏನು ಎಂಬುದು ತಮಗೆ ಗೊತ್ತಾಗಿದೆ. ಹಲವಾರು ಬಾರಿ ಇದರ ಬಗ್ಗೆ ಮನವರಿಕೆ ಮಾಡಿದರೂ ಕೂಡ ಇದು ಆಗಿಲ್ಲ. ನೆನ್ನೆ ಪರಿಸ್ಥಿತಿ ವಿಕೋಪಕ್ಕೆ ಹೋಗಿ ನಮ್ಮಲ್ಲಿರತಕ್ಕಂಥ ಎಲ್ಲಾ ನಾಗರೀಕರು ಅಲ್ಲಿರತಕ್ಕಂಥ ನೀರಿನ ಟ್ಯಾಕ್ಸಿಗೆ ದಂಗೆ ಹೋಗಿ ಒಡೆದು ಹಾಕತಕ್ಕಂಥ ಪರಿಸ್ಥಿತಿಗೆ ಹೋಗಿತ್ತು. ನಾಲ್ಕು ದಿವಸದಿಂದ ಸತತವಾಗಿ ಇಡೀ ಚಾಮರಾಜಪೇಟೆಯಲ್ಲಿ ನೀರು ಸರಬರಜಾ ಆಗಿಲ್ಲ. ಇದರ ಬಗ್ಗೆ ನಾನು ಬಹಳ ವಿಷಾದದಿಂದ ಹೇಳುತ್ತಿದ್ದೇನೆ. ನಾನು ನೆನ್ನೆಯಿಂದ ಇವೊತ್ತಿನವರೆಗೆ ಮಾಹಿತಿಯನ್ನು ಕಲೆಕ್ಟ್ ಮಾಡಿದ್ದೇನೆ, ಅದರ ಪ್ರಕಾರವಾಗಿ ಬಿನ್ನಿಪೇಟೆ ಕ್ಷೇತ್ರದಲ್ಲಿ ಬೆಳಿಗ್ಗೆ, ಮಾಗಡಿ ರೋಡಿಗೆ ಆರರಿಂದ ಹತ್ತೂವರೆ ಗಂಟೊಗೆ